ಶ್ರೀ ಪಿ.ಜಿ. ಆರ್. ಸಿಂಧ್ಯ (ಗೃಹ ಸಚಿವರು) :—

ಅ) 1996-97 - 28466
1997-98 - 35672
1998-99 - 717
(ಮೇ ಅಂತ್ಯಕ್ಕೆ)

ಆ) ಅಭಿಯೋಗದಿಂದ ಹಿಂತೆಗೆದುಕೊಳ್ಳಲಾದ ಪ್ರಕರಣಗಳನ್ನು ಭಾ.ದಂ.ಸಂ. ಮೋಟಾರು ವಾಹನ ಕಾಯ್ದೆ, ಅರಣ್ಯ ಕಾಯ್ದೆ ಮತ್ತು ಫ್ಯಾಕ್ಟರಿ ಕಾಯ್ದೆಗಳ ಅಡಿಯಲ್ಲಿ ಹೂಡಲಾಗಿತ್ತು.

ಇ) ಸಾರ್ವಜನಿಕ ಹಿತಾಸಕ್ತಿ.

ಬೆಂಗಳೂರು ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿನ ಅಧಿಕಾರಿಗಳು ಲೋಕಾಯುಕ್ತದ ಬಲೆಗೆ ಸಿಕ್ಕಿಕೊಂಡಿರುವುದರ ಬಗ್ಗೆ.

1648(2318) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಜಿಲ್ಲೆಯ ಅಬಕಾರಿ ಹೆಚ್ಚುವರಿ ಉಪ ಆಯುಕ್ತರು ಲೋಕಾಯುಕ್ತದ ಜಾಲದಲ್ಲಿ ಸಿಕ್ಕಿಕೊಂಡಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಆ) ಇದೇ ರೀತಿ ಅಬಕಾರಿ ಇಲಾಖೆಯಲ್ಲಿ ಈ ವರ್ಷ ಲೋಕಾಯುಕ್ತದ ಬಲೆಗೆ ಸಿಲುಕಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?

ಇ) ಈ ಅಧಿಕಾರಿಯ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಕ್ರಮ ಕೈಗೊಳ್ಳದಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಹೌದು.

ಈ ಬಗ್ಗೆ ಲೋಕಾಯುಕ್ತದವರು ಮಾಡಿರುವ ಶಿಫಾರಸ್ಸು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 1 (ಒಬ್ಬರು)

ಮೇಲೆ ಹೇಳಿದ ಕ್ರಮ ಸಂಖ್ಯೆ (ಅ)ರಲ್ಲಿ ನಮೂದಿಸಿರುವ ಅಧಿಕಾರಿಯನ್ನು ಹೊರತುಪಡಿಸಿ.

ಇ) ಕರ್ನಾಟಕ ಲೋಕಾಯುಕ್ತರ ಶಿಫಾರಸ್ಸಿನನ್ವಯ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ಬಿಜಾಪುರ ತಾಲ್ಲೂಕಿನ ಮಮದಾಪುರ ಗ್ರಾಮಕ್ಕೆ 110 ಕೆ.ವಿ. ಸ್ಟೇಷನ್ ಮಂಜೂರಾತಿ.

1649(2231) ಶ್ರೀಪಾಟೀಲ್ ಶಿವಾನಂದ ಸಿದ್ರಾಮಪ್ಪ (ತ್ರಿಕೋಟ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಿಜಾಪುರ ತಾಲ್ಲೂಕಿನ ಮಮದಾಪುರ ಗ್ರಾಮಕ್ಕೆ 110 ಕೆ.ವಿ. ಸ್ಟೇಷನ್‌ನು ಮಂಜೂರಾತಿ ಆಗಿದೆಯೇ?

2) ಹಾಗಿದ್ದಲ್ಲಿ, ಸದರಿ ಸ್ಟೇಷನ್‌ಗಾಗಿ ಭೂ ಸ್ವಾಧೀನಪಡಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ, ಸದರಿ ಭೂ ಮಾಲೀಕರಿಗೆ ಪರಿಹಾರ 4 ಲಕ್ಷ ರೂ. ಹಣವನ್ನು ಇಲ್ಲಿಯವರೆಗೂ ವಿತರಿಸದಿರಲು ಕಾರಣಗಳೇನು?

4) ಸದರಿ ಸ್ಟೇಷನ್ ದ ಕಾರ್ಯ ಸಂಪೂರ್ಣವಾಗಲು ನಿಗದಿಪಡಿಸಿರುವ ದಿನಾಂಕ ಯಾವುದೇ? ಸದರಿ ಸ್ಟೇಷನ್ ಆಗದೇ ಇದ್ದರೆ ಆಗುವ ತೊಂದರೆಗಳಾವುವು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

1) ಹೌದು.

2) ಮೇಲೆ ತಿಳಿಸಿದ ಸ್ಟೇಷನ್ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯು ನಡೆದಿದ್ದು, ಈ ಭೂಮಿಯ ಮೌಲ್ಯದ ಬಗ್ಗೆ 1 ಲಕ್ಷ ರೂ. ಮೊತ್ತವನ್ನು (ಶೇ. 25 ರಷ್ಟು) ಈಗಾಗಲೇ ಉಪ ವಿಭಾಗಾಧಿಕಾರಿ, ಬಿಜಾಪುರದವರಿಗೆ ಸಂದಾಯ ಮಾಡಲಾಗಿದೆ. ಮುಂದಿನ ಕ್ರಮವನ್ನು ಜರೂರಾಗಿ ಜರುಗಿಸಲು ಕಂದಾಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

3) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸಬ್-ಸ್ಟೇಷನ್ ನಿರ್ಮಾಣಕ್ಕೆ ಬೇಕಾಗುವ ಜಮೀನಿನ ಬೆಲೆ ರೂ. 4 ಲಕ್ಷ ಆಗುವುದೆಂದು ಬಿಜಾಪುರದ ಉಪವಿಭಾಗದ ಉಪ